

ಕೊಂದು ಹಾಕಿದರು. ಆ ಘಟನೆಗೆ ನಮ್ಮ ಸೈನಿಕರೆ ಕಾರಣವೆಂದು ಆ ಸೇಡು ತೀರಿಸಿಕೊಳ್ಳಬೇಕೆಂದೆ ಇಲ್ಲಿಗೆ ಬಂದದ್ದು. ಅಲ್ಲದೆ...'

ರವಿಕೀರ್ತಿಯ ಮಾತು ಇನ್ನೂ ಮುಗಿಯುವ ಪೂರ್ವದಲ್ಲಿಯೇ ವೀರಾದಿತ್ಯ 'ಹೌದು ಮಹಾಮಂತ್ರಿಗಳೆ, ಆ ಸೇಡು ತೀರಿಸಿಕೊಳ್ಳಲು ಆಗಲಿಲ್ಲವೆಂದು ಈಗ ರಾಜದ್ರೋಹದ ಕೃತ್ಯವನ್ನು ಮಾಡಿದ್ದು, ಗೂಢಚಾರಿಕೆಯನ್ನು ಮಾಡುತ್ತಿರುವುದು.'

'ಅಣ್ಣಾಜಿ, ವೀರಾದಿತ್ಯನ ಮಾತು ಒಂದು ರೀತಿಯಲ್ಲಿ ಸರಿ ಎನಿಸುತ್ತಿಲ್ಲವೇ. ಮಹಾಬಲ ಸೇಡು ತೀರಿಸಿಕೊಳ್ಳಲಾಗದೆ ರಾಜದ್ರೋಹದ ಕಾರ್ಯವನ್ನೇಕೆ ಮಾಡಿರಬಾರದು?'

ವಿಷ್ಣುವರ್ಧನನ ಮಾತಿನಿಂದ ವೀರಾದಿತ್ಯ 'ಹೌದು ಚಿಕ್ಕಪ್ರಭು, ಈ ಮಹಾಬಲ ತಮ್ಮ ರಾಜ್ಯದ ಪರವಾಗಿ ಗೂಢಚಾರಿಯಾಗಿ ಚಾಲುಕ್ಯ ಸಾಮ್ರಾಜ್ಯಕ್ಕೆ ಕಂಟಕ ತರಲು ಹೊಂಚು ಹಾಕಿದ್ದ. ಆ ಸಂಚು ಅರಿತು ನಾನು ಅವನಿಗೆ ಬುದ್ಧಿವಾದ ಹೇಳಲು ಪ್ರಯತ್ನಿಸಿದೆ. ಆದರೆ, ಆತ ತನ್ನ ನಡೆಯನ್ನು ತಿದ್ದಿಕೊಳ್ಳಲಿಲ್ಲ. ಅದಕ್ಕೆ ಆತನ ಮೇಲೆ ದಾಳಿ ಮಾಡಿದ್ದು. ರಾಜದ್ರೋಹಿ ಎನ್ನುತ್ತಿರುವುದು. ಈ ನೆಲದ ಅನ್ನವನ್ನುಂಡು ದ್ರೋಹ ಬಗೆಯುವುದು ಕೃತಘ್ನತೆ ಅಲ್ಲವೇ ಪ್ರಭು. ಆ ಕಾರ್ಯಕ್ಕೆ ರಾಜದಂಡನೆ ವಿಧಿಸಬೇಕು'.

ವೀರಾದಿತ್ಯನ ಮಾತನ್ನು ಕೇಳಿ ಪುಲಕೇಶಿಯೇ 'ವಿಷ್ಣು, ಮಹಾಬಲ ನಮ್ಮ ಸೇನೆಯೊಂದಿಗೆ ಬಂದ ದಿನದಿಂದಲೂ ನಾನು ಬಲ್ಲೆ. ನರ್ಮದೆಯ ತೀರದಲ್ಲಿ ಅಂದು ನಡೆದ ಆ ದುರ್ಘಟನೆ ಆತನ ಜೀವನದಲ್ಲಿ ನಡೆಯಬಾರದಾಗಿತ್ತು. ಆ ಭೀಕರ ಘಟನೆಯನ್ನು ಸಹಿಸಿಕೊಳ್ಳದ ಆತನ ಮನ ಇಲ್ಲಿಗೆ ಬರುವಂತೆ ಪ್ರೇರೇಪಿಸಿತು. ಮೊದಲು ಆತ ನಮ್ಮ ಸೈನ್ಯದ ಬಗ್ಗೆ ತಪ್ಪಾಗಿ ತಿಳಿದುಕೊಂಡು ಸೇಡು ತೀರಿಸಿಕೊಳ್ಳಲೆಂದೆ ಇಲ್ಲಿಗೆ ಬಂದದ್ದು ನಿಜ. ನಂತರ ಆ ಅಮಾನವೀಯ ಕೃತ್ಯವನ್ನು ಅವರ ಸಂಬಂಧಿಕರೆ ವೈಯಕ್ತಿಕ ದ್ವೇಷದಿಂದ ಮಾಡಿದ್ದಾರೆಂದು ತಿಳಿದ ಮೇಲೆ ತನ್ನ ತಪ್ಪಿನ ಅರಿವಾಗಿ ಇಂದು ವಾತಾಪಿಯ ಹಿತೈಷಿಯಂತೆ ಇಲ್ಲಿ ಬದುಕುತ್ತಿದ್ದಾನೆ. ನೀನು ತಿಳಿದುಕೊಂಡಂತೆ ಆತ ರಾಜದ್ರೋಹಿ ಅಲ್ಲ. ರಾಜದ್ರೋಹಿಯ ಪಟ್ಟ ಕಟ್ಟುವ ವೀರಾದಿತ್ಯನ ಸಂಚು ಅದು. ತನ್ನ ಮಾತು ಕೇಳಲಿಲ್ಲವೆಂಬ ಕಾರಣದಿಂದ ಹಲ್ಲೆ ಮಾಡಿದ್ದು, ಅವನ ಮೇಲೆ ಖಡ್ಗ ಎತ್ತಿದ್ದು.'

'ಆದರೂ ಅಣ್ಣಾಜೀ ನಮ್ಮ ರಾಜ್ಯಕ್ಕೆ ಕಂಟಕವಾಗಬಾರದೆಂಬ ಕಾರಣಕ್ಕೆ ವೀರಾದಿತ್ಯ ಆತನ ಮೇಲೆ ಖಡ್ಗ ಎತ್ತಿದ್ದರೆ ಅದು ಹೇಗೆ ತಪ್ಪು ಆಗುತ್ತದೆ. ಯುದ್ಧ ಮಾಡುವ ಸಮಯದಲ್ಲಿ ನಾವು ಖಡ್ಗ ಎತ್ತಲೇ ಬೇಕಾಗುತ್ತದೆ. ರಾಜ್ಯ ವಿಸ್ತೀರ್ಣ ನೀತಿಯಾಗಲಿ, ವಿದ್ರೋಹಿಗಳ ದಂಡನಾ ನೀತಿ ಆಗಲಿ ಅದೇ ತಾನೇ?'

'ವಿಷ್ಣು, ರಾಜ್ಯ ವಿಸ್ತೀರ್ಣಾ ನೀತಿಯೇ ಬೇರೆ. ಪ್ರಜಾ ನೀತಿಯೇ ಬೇರೆ. ಯುದ್ಧದ ಸಮಯದಲ್ಲಿ, ರಾಜ್ಯ ವಿಸ್ತಾರದ ವೇಳೆಯಲ್ಲಿ ಅನೇಕ ಅಪಸವ್ಯಗಳು ಸಹಜವಾಗಿಯೇ ಆಗಿಬಿಡುತ್ತವೆ. ಜೊತೆಗೆ ವೈರಿಗಳ ಪ್ರಾಣ ಹರಣವಾಗುವುದು ಸ್ವಾಭಾವಿಕವೇ. ಆದರೆ, ಯಾವುದೇ ವ್ಯಕ್ತಿ ಯಾವ ದೇಶದವನೆ ಆಗಿರಲಿ ನಮ್ಮ ರಾಜನೀತಿಯಂತೆ ಈ ವಾತಾಪಿ ನೆಲದಲ್ಲಿ ಶಾಂತರೀತಿಯಿಂದ ಬಾಳುತ್ತಿದ್ದಾನೆಂದರೆ ಅವನೂ ನಮ್ಮ ಪ್ರಜೆಯೇ. ಮಹಾಬಲ ಕನೋಜನಿಂದ ಇಲ್ಲಿಗೆ ಬಂದು ನೆಲೆಸಿ ತನ್ನ ರಾಜ್ಯದಲ್ಲಿ ಮಾಡುತ್ತಿದ್ದ ಕಾರ್ಯವನ್ನು ಇಲ್ಲಿ ಕೂಡಾ ಅಷ್ಟೇ ರಾಜನಿಷ್ಠೆಯಿಂದ ಮಾಡುತ್ತಿರುವುದು ನಾನು ಚೆನ್ನಾಗಿ ಬಲ್ಲೆ. ಪರ್ಶಿಯಾದಿಂದ ಕಾಣಿಕೆಯಾಗಿ ಬಂದಂಥ ವಿಶೇಷ ತಳಿಯ ಅಶ್ವಗಳನ್ನು ಪಳಗಿಸಿದ್ದು ಈತನೇ. ಜೊತೆಗೆ ಸಾಕಷ್ಟು ವರಹಗಳನ್ನು ನೀಡಿ ಖರೀದಿಸಿದಂತಹ ಅನೇಕ ಅಶ್ವಗಳಲ್ಲಿ ಅನೇಕ ಹಟಮಾರಿ ಅಶ್ವಗಳನ್ನು ಪಳಗಿಸಿ ರಾಜ್ಯದ ಬೊಕ್ಕಸಕ್ಕೆ ಆಗಬಹುದಾಗಿದ್ದ ಹಾನಿಯನ್ನು ತಡೆದು ಸಾಮ್ರಾಜ್ಯಕ್ಕೆ ಸಹಾಯ ಮಾಡಿದಂಥ ಅಸಾಮಾನ್ಯ ಈ ಮಹಾಬಲ'.

'ಹೌದೆ ಅಣ್ಣಾಜೀ...? ನಿಜಕ್ಕೂ ಆತನ ಆ ಕಾರ್ಯ ಎಲ್ಲರೂ ಮೆಚ್ಚುವಂತಹದ್ದು'.

'ನಿನಗೆ ಗೊತ್ತೆ ವಿಷ್ಣು, ನಿನ್ನ ಮುದ್ದಿನ ಶ್ವೇತಾಶ್ವವನ್ನು ಪಳಗಿಸಿದ್ದು ಈ ಮಹಾಬಲನೇ. ಅದು ವಾತಾಪಿಗೆ ಬಂದಾಗ ಅದೆಷ್ಟು ಮೊಂಡತನದಿಂದ ವರ್ತಿಸುತಿತ್ತು ಗೊತ್ತೆ...? ಎಷ್ಟೋ ಯೋಧರು ಅದನ್ನು ಪಳಗಿಸಲು ಪ್ರಯತ್ನಿಸಿದರೂ ಅವರೆಲ್ಲ ಸೋತು ಹೋದರು. ಜೊತೆಗೆ ಎಷ್ಟೋ ಸೈನಿಕರು ಅದನ್ನು ಪಳಗಿಸುತ್ತೇವೆಂದು ಪ್ರಯತ್ನಿಸಿ ಅದರ ಕಾಲ್ತುಳಿತಕ್ಕೆ ಒಳಗಾಗಿಯೇ ತಮ್ಮ ಪ್ರಾಣವನ್ನು ಕಳೆದುಕೊಂಡರು. ಆದರೆ, ಯಾವಾಗ ಅದು ಮಹಾಬಲನ ಕೈಗೆ ಸಿಕ್ಕಿತೋ ಕೆಲವೇ ದಿನಗಳಲ್ಲಿ ಅದೆಷ್ಟು ಶಾಂತ ಸ್ವಭಾವದಾಯಿತು. ಅದನ್ನು ಕಂಡು ನಿಜಕ್ಕೂ ನನಗೆ ಆಶ್ಚರ್ಯವಾಯಿತು. ಆ ನಂತರವೇ ಆ ಶ್ರೇಷ್ಠ ಅಶ್ವವನ್ನು ನಿನಗೆಂದು ವೆಂಗಿ ರಾಜ್ಯಕ್ಕೆ ಕಳುಹಿಸಿದ್ದು. ಖಡ್ಗ ಕೇವಲ ಯುದ್ಧ ಮಾಡುವುದಕ್ಕಾಗಿ ಮಾತ್ರ ಅಲ್ಲ. ನಾಡಿನ ಶಾಂತಿ ಸ್ಥಾಪನೆಗಾಗಿ ಜೊತೆಗೆ ಪ್ರಜೆಗಳ ಸಂರಕ್ಷಣೆ ಮತ್ತು ಕಲ್ಯಾಣಕ್ಕಾಗಿ ಬಳಸಬೇಕೆ ಹೊರತು ಅಮಾಯಕರ ಮೇಲೆ ಪ್ರಹಾರಕ್ಕಲ್ಲ. ಜೊತೆಗೆ ಅದು ಎಂದಿಗೂ ತರವಲ್ಲ. ಅಂತಹ ಹೇಯ ಕಾರ್ಯವನ್ನು ವೀರಾದಿತ್ಯ ಈತನ ಮೇಲೆ ಮಾಡಿದ್ದು ದೊಡ್ಡ ಅಪರಾಧವಲ್ಲವೇ ವಿಷ್ಣು?'

ಅಣ್ಣನ ಮಾತಿನ ಸತ್ಯವನ್ನು ಅರಿತ ವಿಷ್ಣುವರ್ಧನ 'ಹೌದು ಅಣ್ಣಾಜಿ ನಿಮ್ಮ ಮಾತು ನಿಜ. ಖಂಡಿತ ಅಪರಾಧವೇ. ಹೌದು ನನ್ನ ಪ್ರೀತಿಯ ಅಶ್ವ ಮಹಾಬಲನ ಕೈಚಳಕದಿಂದ ಪಳಗಿರುವುದೆ. ಅದು ನನಗೆ ಗೊತ್ತೆ ಇರಲಿಲ್ಲ ಅಣ್ಣಾಜಿ... ಮಹಾಬಲನ ಈ ಕಾರ್ಯ ನನಗೆ ಬಹಳ ಸಂತೋಷವನ್ನು ತಂದಿತು'.

'ಚಕ್ರವರ್ತಿ ಮತ್ತು ಅವನ ಬಳಗದವರು ತನ್ನ ಪ್ರಜೆಗಳಿಗೆ ಕಂಟಕವಾಗಿರುವ ವೈರಿಯನ್ನು ಹೊಡೆದುರುಳಿಸುವ ಸಾಮರ್ಥ್ಯದ ಜೊತೆಗೆ ಜಾತಿ, ಮತ, ಧರ್ಮ, ಅಂತಸ್ತು ನೋಡದೆ ತನ್ನ ರಾಜ್ಯದ ಸರ್ವ ಪ್ರಜೆಗಳನ್ನು ರಕ್ಷಿಸುವಂಥ ಅಂತಃಕರಣದ ರಾಜಧರ್ಮವನ್ನು ಹೊಂದಿರಬೇಕು. ಅಧಿಕಾರಕ್ಕಿಂತ ಮಾನವೀಯತೆ ದೊಡ್ಡದು. ರಾಜದಂಡನೆಯು ಚಕ್ರವರ್ತಿಯ ವ್ಯಕ್ತಿತ್ವಕ್ಕೆ ಶಿಖರಪ್ರಾಯವಾಗಬೇಕೆ ಹೊರತು, ಕಳಂಕಿತನನ್ನಾಗಿ ಮಾಡಬಾರದು. ನ್ಯಾಯನಿರ್ಣಯದ ಮುಂದೆ ಮಹಾರಾಜನು ಒಂದೇ ಜನಸಾಮಾನ್ಯನೂ ಒಂದೇ ವಿಷ್ಣು'

ಅದಕ್ಕೆ ರವಿಕೀರ್ತಿಯು 'ನಿಜ ಚಿಕ್ಕಪ್ರಭು, ಪ್ರಭುಗಳು ಹೇಳಿದಂತೆ ಅಧಿಕಾರ ಇರುವುದು ಜನರ ಕಲ್ಯಾಣಕ್ಕಾಗಿ ಶ್ರಮಿಸಲು. ಆದರೆ ವೀರಾದಿತ್ಯ ಮಾಡಿದ್ದು ಏನು..? ಸೇನಾಧಿಪತಿ ಅಧಿಕಾರವನ್ನೇ ಗುರಾಣಿಯನ್ನಾಗಿ ಮಾಡಿಕೊಂಡು ಪ್ರಜೆಗಳಿಗೆ ಅನ್ಯಾಯವೆಸಗಿ ಅಧಿಕಾರ ದುರ್ಬಳಕೆ ಮಾಡಿಕೊಂಡಿರುವುದು. ಅನ್ಯಾಯವಾಗಿ ಇನ್ನೊಬ್ಬರ ಮೇಲೆ ಎರಗುವುದಾಗಲಿ, ದಾಳಿ ಮಾಡುವುದಾಗಲಿ ದೊರೆಗಳಿಗೆ ಎಂದೂ ಒಪ್ಪಿತವಲ್ಲ ಎನ್ನುವುದು ತಮಗೂ ಗೊತ್ತು. ಆದರೆ, ಸಾಮ್ರಾಜ್ಯದ ರಕ್ಷಣೆ, ಪ್ರಜೆಗಳ ಸುರಕ್ಷತೆಯ ವಿಷಯ ಬಂದಾಗ ಎಂಥ ತೀಕ್ಷ್ಣ ದಾಳಿಗೂ ಸಿದ್ಧವಾಗುತ್ತಿದ್ದ ಮನಸು ಅವರದು. ಹರ್ಷವರ್ಧನ ದೊರೆಯ ಮೇಲೆ ನಡೆದ ಯುದ್ಧ ಅದೇ ತೆರನಾದುದು. ಪ್ರಭುಗಳಿಗೆ ತಾವಾಗಿಯೇ ದಾಳಿ ಮಾಡಬೇಕೆಂಬ ಮನಸಿರಲಿಲ್ಲ. ಆದರೆ ಸಾಮ್ರಾಜ್ಯಕ್ಕೆ ಅದಕ್ಕಿಂತ ಹೆಚ್ಚಾಗಿ ಪ್ರಜೆಗಳಿಗೆ ಕಂಟಕ ಬರುತ್ತದೆಯೆಂದರೆ ಸುಮ್ಮನೆ ಕೂಡದ ಶೂರತ್ವದ ಎಂಟೆದೆ ಅವರದು. ಆ ಕಾರಣವೇ ಸಮರಕ್ಕೆ ನಾಂದಿ ಹಾಡಬೇಕಾಯಿತು. ಯುದ್ಧದಲ್ಲಿ ನಡೆದ ಸೈನಿಕರ ಸಾವು, ನೋವು, ಜೊತೆಗೆ ನರ್ಮದೆಯಲ್ಲಿ ನೀರಿಗಿಂತ ರುಧಿರವೇ ಹೆಚ್ಚು ಹರಿದಿದ್ದನ್ನು ನೋಡಿ ಚಕ್ರವರ್ತಿಗಳ ಮನಸು ಮಮ್ಮಲ ಮರುಗಿತ್ತು. ಕಾರಣವಿಷ್ಟೇ, ಯುದ್ಧಕ್ಕಿಂತ ಶಾಂತಿ ಮುಖ್ಯವೆಂಬ ಪ್ರಭುಗಳ ಅಂತಃಕರುಣೆಯ ಮನಸ್ಥಿತಿ. ಹಾಗೆಯೇ ಸಾಮಾನ್ಯರ, ಅಮಾಯಕರ ಮೇಲಿನ ದೌರ್ಜನ್ಯ, ಶೋಷಣೆಯನ್ನು ಪ್ರಭುಗಳು ಯಾವತ್ತೂ ಸಹಿಸದವರಲ್ಲ. ಹೀಗಿರುವಾಗ ಸಾಮ್ರಾಜ್ಯಕ್ಕೆ ತನ್ನ ಕಾರ್ಯಗಳಿಂದ ಸಹಾಯ ಮಾಡಿದ ಅಮಾಯಕ